ಕಛೇರಿ ದೂರವಾಣಿ: 0836-2255180
ಕಛೇರಿ ಫ್ಯಾಕ್ಸ್: 0836-2307402
ಮೊ: 9449952389
ಇ ಮೇಲ್: kajavivi@gmail.com

# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

**ಗೊಟಗೋಡಿ, ರಾ. ಹೆ. -4, ಶಿಗ್ಗಾವಿ ತಾ. ಹಾವೇರಿ ಜಿ. – 581 205**

ಕಜಾವಿವಿ/ಆವಿ/ಕ್ರಮಾಂಕ: 765/ 2018-19

ಕುಲಸಚಿವರು

ದಿನಾಂಕ: 24.11.2018

## ವಾಹನ ಬಹಿರಂಗ ಹರಾಜು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಸುಸ್ಥಿತಿಯಲ್ಲಿರುವ ಹಳೆಯ ವಾಹನವನ್ನು ಇದ್ದ ಸ್ಥಿತಿಯಲ್ಲಿಯೇ ದಿನಾಂಕ:07.12.2018 ರ ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಕೇಂದ್ರ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು.

| ಕ್ರಸಂ. | ವಾಹನದ ಹೆಸರು | ವಾಹನದ ಸಂಖ್ಯೆ | ಖರೀದಿಸಿದ ವರ್ಷ | ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಮೊತ್ತ ರೂ. |
|---|---|---|---|---|
| 1 | Ford Fiesta | KA-27M-5829 | 2012 | ರೂ. 2,25,000/- |

ಸದರಿ ವಾಹನವನ್ನು ಖರೀದಿಸಲು ಇಚ್ಛಿಸುವವರು ಹರಾಜಿನಲ್ಲಿ ಠೇವಣಿಯಾಗಿ ರೂ. 22,500/- ಗಳನ್ನು ಪಾವತಿಸಿ ಭಾಗವಹಿಸಬಹುದು. ಹರಾಜಿಗಿಟ್ಟ ವಾಹನವನ್ನು ನೋಡಲಿಚ್ಚಿಸುವವರು ಕಛೇರಿ ಸಮಯದಲ್ಲಿ ರಜೆ ದಿನ ಹೊರತುಪಡಿಸಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಜಾನಪದ ವಿಶ್ವವಿದ್ಯಾಲಯದ ಕಛೇರಿಯಲ್ಲಿ ಪಡೆಯಬಹುದು.

**ವಾಹನ ಹರಾಜು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

**ಷರತ್ತುಗಳು:** (1) ಮುಂಗಡ ಠೇವಣಿ ಹಣ ಭರಣ ಮಾಡಿ ಅಧಿಕೃತ ರಶೀದಿಯನ್ನು ಪಡೆಯತಕ್ಕದ್ದು. (2) ಠೇವಣಿ ಹಣದ ಅಧೀಕೃತ ರಶೀದಿ ಪಡೆದವರು ಮಾತ್ರ ಈ ಜಾಹೀರಾತು ಹರಾಜಿನಲ್ಲಿ ಭಾಗವಹಿಸತಕ್ಕದ್ದು. (3) ಹರಾಜಿನಲ್ಲಿ ಭಾಗವಹಿಸಿದವರು ಪೂರ್ಣ ಹರಾಜು ಮುಗಿದ ನಂತರ ಫಲಾನುಭವಿಗಳನ್ನು ಹೊರತುಪಡಿಸಿ ಅಧೀಕೃತ ರಶೀದಿಯನ್ನು ಕೊಟ್ಟು ತಮ್ಮ ಠೇವಣಿ ಹಣವನ್ನು ಹಿಂದೆ ತೆಗೆದುಕೊಳ್ಳಬಹುದು. (4) ಯಶಸ್ವಿ ಬಿಡ್‌ದಾರರು ಹರಾಜಿನ ಶೇ. 25% ರಷ್ಟು ಹಣವನ್ನು ಹರಾಜಿನ ದಿನದಂದು ಭರಣ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಬಾಕಿ ಉಳಿದ ಶೇಕಡಾ 75% ರಷ್ಟು ಹಣವನ್ನು ವಿಶ್ವವಿದ್ಯಾಲಯದ ಅನುಮೋದನೆ ಪತ್ರ ಮುಟ್ಟಿದ 3 ದಿನಗಳೊಳಗಾಗಿ ಹಣ ಸಂದಾಯ ಮಾಡಿ ವಾಹನವನ್ನು ಪಡೆದುಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಹಾಗೂ ಶೇ. 25% ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (5) ಹರಾಜಿನಲ್ಲಿ ಅಂತಿಮ ತೀರ್ಮಾನವು ವಿಶ್ವವಿದ್ಯಾಲಯದ್ದಾಗಿರುತ್ತದೆ. (ಫಲಾನುಭವಿಗಳಿಗೆ ಕೊಡುವ ಅಥವಾ ಬಿಡುವ ಹಕ್ಕು ವಿಶ್ವವಿದ್ಯಾಲಯ ಕಾಯ್ದಿರಿಸಿಕೊಂಡಿರುತ್ತದೆ). (6) ಅರ್ಹ ಬಿಡ್‌ದಾರರು ಬಿಡ್ಡಿನ ಹಣ ಹೊರತುಪಡಿಸಿ ಚಾಲ್ತಿಯಲ್ಲಿರುವ ಮೌಲ್ಯವರ್ದಿತ ತೆರಿಗೆಯನ್ನು ಪ್ರತ್ಯೇಕವಾಗಿ ಪಾವತಿಸತಕ್ಕದ್ದು. ಮೇಲ್ಕಾಣಿಸಿದ ಎಲ್ಲ ಷರತ್ತುಗಳಿಗೆ ಎಲ್ಲರೂ ಬದ್ಧರಾಗಿರತಕ್ಕದ್ದು ಹಾಗೂ ಹರಾಜಿನಲ್ಲಿ ಭಾಗವಹಿಸತಕ್ಕದ್ದು.

ಕುಲಸಚಿವರು
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ